# ಹೊಸ ಕಾಲದ ಅಮ್ಮಂದಿರ ನವನವೀನ ಸಮಸ್ಯೆಗಳು!

## ಅಮ್ಮ ಬದಲಾಗಿಲ್ಲ, ಅಮ್ಮನ ಮುಂದಿರುವ ಸವಾಲುಗಳು ಬದಲಾಗಿವೆ...



ಅಮ್ಮ ಎನ್ನುವ 'ವ್ಯಕ್ತಿಚಿತ್ರ' ಯಾವ ಕಾಲಕ್ಕೂ ಬದಲಾಗದಿರಬಹುದು. ಆದರೆ, ಅಮ್ಮನ ಎದುರಿಗಿರುವ ಸವಾಲುಗಳು ಬದಲಾಗುತ್ತಲೇ ಇರುತ್ತವೆ. ಈ ಕಾಲದ ಅಮ್ಮಂದಿರನ್ನೇ ನೋಡಿ: ಮಕ್ಕಳನ್ನು ಬೆಳೆಸುವುದಕ್ಕೆ ಸಂಬಂಧಿಸಿದಂತೆ ಅವರು ತಮ್ಮ ತಾಯಿ–ಅಜ್ಜಿಗಿಂತಲೂ ಭಿನ್ನವಾದ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಮಕ್ಕಳಿಗೆ ಏನನ್ನು ತಿನ್ನಿಸಬೇಕು ಎನ್ನುವುದರಿಂದ ಹಿಡಿದು, ಏನನ್ನು ನೋಡಿಸಬೇಕು ಹಾಗೂ ಏನನ್ನು ಮರೆಮಾಚಬೇಕು ಎನ್ನುವವರೆಗೆ ಹಲವು ಸವಾಲುಗಳನ್ನು 'ಹೊಸ ಕಾಲದ ಅಮ್ಮಂದಿರು' ಎದುರಿಸುತ್ತಿದ್ದಾರೆ. ಮಕ್ಕಳ ಕಲಿಕೆಯ ಮನೆಯಾಚೆಗಿನ ಅವಕಾಶಗಳು ಕಡಿಮೆಯಾಗಿರುವುದು ಹಾಗೂ ಬಂಧುಬಳಗದ ನಡುವೆ ಮೊಬೈಲ್ ಫೋನ್ ನುಸುಳಿರುವುದು ಅಮ್ಮಂದಿರ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಬದಲಾದ ಸಂದರ್ಭದಲ್ಲಿ ಪಾಪದ ಅಮ್ಮಂದಿರ ಮಡಿಲಿಗೆ ಇನ್ನಷ್ಟು ಜವಾಬ್ದಾರಿಗಳು ಬಿದ್ದಿವೆ. ಆ ಜವಾಬ್ದಾರಿಗಳೇನು? 'ಅಮ್ಮಂದಿರ ದಿನ'ದ ಆಸುಪಾಸಿನಲ್ಲಿ ಹೊಸಗಾಲದ ಅಮ್ಮಂದಿರ ಲೋಕದೊಳಗೊಂದು ಇಣುಕುನೋಟ.

■ ಕೋಡಿಬೆಟ್ಟು ರಾಜಲಕ್ಷ್ಮಿ